

# ವಕ್ರದಂತ ರೋಗಿಗಳಿಗೆ ವರದಾನ
# ದಂತ ಕ್ಲಿಯರ್ ಅಲೈನರ್

**ಮುತ್ತು ಪೋಣಿಸಿದಂತೆ ಸಾಲಾಗಿ ಇರುವ ದಂತಪಂಕ್ತಿಗಳು ಆರೋಗ್ಯದ ಜೊತೆಗೆ ಸೌಂದರ್ಯದ ಲಕ್ಷಣವೂ ಹೌದು. ಅನೇಕ ಕಾರಣಗಳಿಂದ ಹಲ್ಲುಗಳು ಅಡ್ಡಾದಿಡ್ಡಿಯಾಗಿ ಬೆಳೆದರೆ ಏನು ಮಾಡುವುದು? ಇದೀಗ ಇಂಥ ಸಮಸ್ಯೆಗೆ ಸೂಕ್ತ ಉತ್ತರವನ್ನು ದಂತವೈದ್ಯ ವಿಜ್ಞಾನ ಕಂಡುಕೊಂಡಿದೆ.**

■ ಡಾ. ಮುರಲೀ ಮೋಹನ್ ಚೂಂತಾರು

ನಸುಗುಲಾಬಿ ಬಣ್ಣದ ವಸಡಿನ ಮೇಲೆ ಮುತ್ತು ಪೋಣಿಸಿದಂತೆ ಸಾಲಾಗಿ ಶುಭ್ರ ದಂತ ಪಂಕ್ತಿಗಳು ಪಳಪಳನೆ ಹೊಳೆಯುತ್ತಿದ್ದರೆ ಯಾರಿಗೆ ಇಷ್ಟವಿಲ್ಲ ಹೇಳಿ? ಪ್ರತಿಯೊಬ್ಬರಿಗೂ ಸುಂದರ ದಂತ ಪಂಕ್ತಿಗಳು ಇರಬೇಕೆಂಬ ಮಹದಾಸೆ ಇರುತ್ತದೆ. ಹಲ್ಲುಗಳು ಎಲ್ಲೆಂದರಲ್ಲಿ ಮೊಳೆದು, ಎರಾಬಿರ‍್ರಿಯಾಗಿ ವಸಡಿನಲ್ಲಿ ಬೆಳೆದಲ್ಲಿ ಉಂಟಾಗುವುದೇ ವಕ್ರದಂತ ಸಮಸ್ಯೆ.

ಬರೀ ಮುಖದ ಸೌಂದರ್ಯವನ್ನು ಹಾಳುಗೆಡುವುದಲ್ಲದೆ, ವ್ಯಕ್ತಿಯ ಆತ್ಮವಿಶ್ವಾಸಕ್ಕೆ ಕೊಡಲಿಯೇಟು ಬಿದ್ದು, ಆತನ ಮಾನಸಿಕ ಬೆಳವಣಿಗೆಗೂ ಮಾರಕವಾಗುವ ಸಾಧ್ಯತೆ ಇರುತ್ತದೆ. ಅತ್ತ ಸರಿಯಾಗಿ ಹಲ್ಲನ್ನು ಶುಚಿಗೊಳಿಸಲಾಗದೆ ಬಾಯಿ ವಾಸನೆ, ವಸಡಿನಲ್ಲಿ ರಕ್ತ, ಇತ್ತ ಸರಿಯಾಗಿ ನಗಲೂ ಸಾಧ್ಯವಾಗದೆ ವ್ಯಕ್ತಿಯು ಮನದೊಳಗೆ ಮರುಗುತ್ತಾ, ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೂ ವಕ್ರದಂತ ಸಮಸ್ಯೆ ಕಾರಣವಾಗುತ್ತದೆ.

ಇಂತಹ ವಕ್ರದಂತ ಸಮಸ್ಯೆಯನ್ನು ಸಾಮಾನ್ಯವಾಗಿ ವಕ್ರದಂತ ಚಿಕಿತ್ಸೆ (**Orthodentic treatment**) ಯ ಮುಖಾಂತರ ವಕ್ರದಂತ ತಜ್ಞರು ಹಲ್ಲುಗಳಿಗೆ ಲೋಹದ ಅಥವಾ ಸೆರಾಮಿಕ್ ಬ್ರಾಕೆಟ್, ಬ್ಯಾಂಡ್ ಮತ್ತು ರಬ್ಬರ್ ಇಲಾಸ್ಟಿಕ್ ಬಳಸಿ ಸರಿಪಡಿಸುವುದು ಎಲ್ಲರಿಗೂ ತಿಳಿದ ವಿಚಾರವೆ. ಆದರೆ ಈ ರೀತಿಯ ಸಾಂಪ್ರದಾಯಿಕ ವಕ್ರದಂತ ಚಿಕಿತ್ಸೆಗೆ ಹಲವಾರು ನ್ಯೂನತೆಗಳು ಇದ್ದು ಹೆಚ್ಚಿನ ರೋಗಿಗಳಿಗೆ ಇದು ಪಥ್ಯವಾಗುವುದಿಲ್ಲ. ಈ ವಕ್ರದಂತ ಚಿಕಿತ್ಸೆ ಅವರಿಗೆ ಬಹಳ ಯಾತನಾಮಯ ಮತ್ತು ಮಾನಸಿಕವಾಗಿ ಹೆಚ್ಚಿನ ಕಿರಿಕಿರಿ ಉಂಟು ಮಾಡುತ್ತದೆ. ಇಂತಹ ವಕ್ರದಂತ ರೋಗಿಗಳಿಗೆ ವಕ್ರದಂತತೆಯನ್ನು ಸರಿಪಡಿಸಲು ಹೊಸದಾಗಿ ಹುಟ್ಟಿಕೊಂಡ ಡೆಂಟಲ್ ಕ್ಲಿಯರ್ ಅಲೈನರ್ ವರದಾನವಾಗಿದೆ.

### ಏನಿದು ದಂತ ಕ್ಲಿಯರ್ ಅಲೈನರ್?

ಕ್ಲಿಯರ್ ಅಲೈನರ್ ಎಂಬುದು ಪ್ಲಾಸ್ಟಿಕ್‌ನಿಂದ ಮಾಡಲ್ಪಟ್ಟ ಬಹಳ ತೆಳು ಹಾಗೂ ಪಾರದರ್ಶಕವಾದ, ರೋಗಿಯೇ ತೆಗೆದು ಹಾಕಬಹುದಾದ ಒಂದು ದಂತ ಸಾಧನ. ಇದೊಂದು ಶುದ್ಧೀಕರಿಸಿದ ಪ್ಲಾಸ್ಟಿಕ್ ಆಗಿದ್ದು, ಬಾಯಿಯೊಳಗಿನ ಚರ್ಮಕ್ಕಾಗಲಿ ಅಥವಾ ಇನ್ನಾವುದೇ ಅಂಗಾಂಗಗಳಿಗೆ ಅಲರ್ಜಿ ಉಂಟು